

# ಮತ್ತೆ ಬಂತು ಅಂಧರ ವಿಶ್ವಕಪ್

ನಾಲ್ಕು ವರ್ಷಗಳ ಬಳಿಕ ಮತ್ತೊಂದು ಅಂಧರ ಟ್ವೆಂಟಿ–20 ವಿಶ್ವಕಪ್‌ಗೆ ವೇದಿಕೆ ಸಜ್ಜಾಗಿದೆ. ಹೋದ ಸಲ ಬೆಂಗಳೂರಿಗಷ್ಟೇ ಸೀಮಿತಗೊಂಡಿದ್ದ ಪಂದ್ಯಗಳು ಈ ಬಾರಿ ದೇಶದ ಪ್ರಮುಖ ನಗರಗಳಿಗೆ ವಿಸ್ತಾರಗೊಂಡಿವೆ. ಈ ಕ್ರೀಡೆಯ ನಿಯಮಗಳೂ ರೋಚಕವಾಗಿರುವ ಕಾರಣ ಕ್ರಿಕೆಟ್ ಪ್ರೇಮಿಗಳಲ್ಲಿ ಕುತೂಹಲ ಮೂಡಿದೆ.

★ ಪ್ರಮೋದ ಜಿ.ಕೆ.

ಚಿತ್ರಗಳು: ಸತೀಶ್ ಬಡಿಗೇರ

‘ಹೊರಪ್ರಪಂಚ ನೋಡಲು ಸಾಧ್ಯವಿಲ್ಲ ಎನ್ನುವ ಬೇಸರ ಎಂದೂ ನಿನ್ನನ್ನು ಕಾಡದಿರಲಿ. ನಿನಗೆ ಏನೂ ಕಾಣದಿದ್ದರೂ ಜಗತ್ತೇ ನಿನ್ನತ್ತ ಕಣ್ಣರಳಿಸಿ ನೋಡುವಂತಹ ಸಾಧನೆ ಮಾಡು. ಕಣ್ಣು ಕತ್ತಲಾದರೂ ಬದುಕು ಬೆಳಕಾಗಲಿ.’ ಎಂದ ಅಮ್ಮನ ಮಾತುಗಳನ್ನು ನೆನಪಿಸಿಕೊಂಡು ಬಿಕ್ಕಿ ಬಿಕ್ಕಿ ಅತ್ತಿದ್ದು ಭಾರತ ಅಂಧರ ಕ್ರಿಕೆಟ್ ತಂಡದ ನಾಯಕರಾಗಿದ್ದ ಶಿವಮೊಗ್ಗದ ಶೇಖರ್ ನಾಯ್ಕ್.

ಅದು 2012ರಲ್ಲಿ ನಡೆದ ಅಂಧರ ಚೊಚ್ಚಲ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯ. ಬೆಂಗಳೂರಿನ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಇದೇ ಶೇಖರ್ ನಾಯ್ಕ್ ಮುಂದಾಳತ್ವದ ತಂಡ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ರೋಚಕವಾಗಿ ಮಣಿಸಿ ಟ್ರೋಫಿ ಎತ್ತಿ ಹಿಡಿದಿತ್ತು. ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಅರ್ಜುನ್ ರಣತುಂಗಾ, ಭಾರತದ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ಸೇರಿದಂತೆ ಸಾವಿರಾರು ಜನ ಭಾರತ ಟ್ರೋಫಿ ಗೆದ್ದ ಸಂಭ್ರಮಕ್ಕೆ ಸಾಕ್ಷಿಯಾಗಿದ್ದರು.

ಹೀಗೆ ಮನದ ತುಂಬಾ ಖುಷಿಯ ನೆನಪುಗಳನ್ನೇ ತುಂಬಿಕೊಂಡಿರುವ ಭಾರತ ಅಂಧರ ತಂಡದ ಆಟಗಾರರು ಈಗ ಮತ್ತೊಂದು ಚುಟುಕು ವಿಶ್ವಕಪ್‌ಗೆ ಅಣಿಯಾಗಿದ್ದಾರೆ. ಈ ಬಾರಿಯ ಟ್ವೆಂಟಿ–20 ವಿಶ್ವಕಪ್ ಜನವರಿ 28ರಂದು ಆರಂಭವಾಗಿ ಫೆಬ್ರುವರಿ 12ರಂದು ಮುಗಿಯಲಿದೆ. ಹೋದ ಸಲ ಪಂದ್ಯಗಳು ಬೆಂಗಳೂರಿಗಷ್ಟೇ ಸೀಮಿತವಾಗಿದ್ದವು. ಆದರೆ ಈ ಬಾರಿ ದೆಹಲಿ, ಫರೀದಾಬಾದ್, ಇಂದೋರ್, ಮುಂಬೈ, ಅಹಬಾದಾಬಾದ್, ಪುಣೆ, ಕೊಚ್ಚಿ, ಭುವನೇಶ್ವರ, ಬೆಂಗಳೂರು, ಹೈದರಾಬಾದ್ ಹೀಗೆ ವಿವಿಧ ನಗರಗಳಿಗೆ ವಿಸ್ತಾರಗೊಂಡಿದೆ. ಹದಿನೈದು ದಿನ ಈ ನಗರಗಳ ಕ್ರಿಕೆಟ್ ಪ್ರೇಮಿಗಳಿಗೆ ಪಂದ್ಯ ವೀಕ್ಷಿಸಲು ಅವಕಾಶ ಸಿಗಲಿದೆ. ವಿಶ್ವಕಪ್‌ನಲ್ಲಿ ಒಟ್ಟು 48 ಪಂದ್ಯಗಳು



ಪ್ರಕಾಶ್ ಜಯರಾಮಯ್ಯ